ಶ್ರೇಯಸ್ ಮಂಜು ಅವರ ಜೊತೆ 'ದಿಲ್‌ದಾರ್' ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ನಿರ್ದೇಶಕ ಸಿಂಪಲ್ ಸುನಿ ಅವರ 'ದೇವರು ರುಜು ಮಾಡಿದನು' ಸಿನಿಮಾದಲ್ಲಿ ಅಭಿನಯಿಸುತ್ತಿದ್ದೇನೆ. 'ದಿಲ್‌ದಾರ್' ಸಿನಿಮಾಗೆ ಕಳೆದ ವರ್ಷವೇ ಸಹಿ ಹಾಕಿದ್ದೆ. 'ದೇವರು ರುಜು ಮಾಡಿದನು' ಸಿನಿಮಾದಲ್ಲಿ ನಟನೆ ಸಾಗಿದೆ.

'ದೇವರು ರುಜು ಮಾಡಿದನು' ಸಿನಿಮಾದಲ್ಲಿನ ನನ್ನ ಪಾತ್ರಕ್ಕೂ 'ದಿಲ್‌ದಾರ್'ನಲ್ಲಿನ ಪಾತ್ರಕ್ಕೂ ತುಂಬಾ ವ್ಯತ್ಯಾಸವಿದೆ. ಸಿಂಪಲ್ ಸುನಿ ಅವರ ಸಿನಿಮಾದಲ್ಲಿ ನಾನು ವೀಣಾವಾದಕಿ ಪಾತ್ರ ನಿಭಾಯಿಸುತ್ತಿದ್ದೇನೆ. ಕುವೆಂಪು ಅವರ ಅಭಿಮಾನಿಯಾಗಿದ್ದು, ಸಾಂಪ್ರದಾಯಿಕ, ಸೀದಾ ಸೀದಾ ಹುಡುಗಿ. 'ದಿಲ್‌ದಾರ್'ನಲ್ಲಿ ಪೂರ್ತಿ ಬೋಲ್ಡ್, ಮಾಡರ್ನ್ ಪಾತ್ರ. ಕಾಲೇಜು ಹುಡುಗಿಯಾಗಿದ್ದು, ಕಾಲೇಜ್ ಲವ್‌ಸ್ಟೋರಿ ಒಳಗೊಂಡ ಸಿನಿಮಾ. ಈ ಎರಡೂ ಸಿನಿಮಾಗಳ ಪಾತ್ರದಲ್ಲಿ ಸಿಕ್ಕಾಪಟ್ಟೆ ವ್ಯತ್ಯಾಸ ಇದೆ.

◆ **ಯಾವ ರೀತಿಯ ಪಾತ್ರಗಳು ನಿಮ್ಮ ನಿರೀಕ್ಷೆಯಲ್ಲಿವೆ?**

ಪಾತ್ರಗಳ ವಿಷಯದಲ್ಲಿ ತುಂಬಾ ಫ್ಲೆಕ್ಸಿಬಲ್ ಇದ್ದೇನೆ. ಈಗ ಸದ್ಯ ಎರಡು ವಿಭಿನ್ನ ಪಾತ್ರಗಳು ಸಿಕ್ಕಿವೆ. ಎರಡು ಸಿನಿಮಾದಲ್ಲಿಯೂ ನನ್ನ ಪಾತ್ರಕ್ಕೆ ಉತ್ತಮ ಸ್ಕ್ರೀನ್ ಟೈಮಿಂಗ್ ಇದೆ. ಹೀಗಾಗಿ ಇಂಥ ಪಾತ್ರವನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದೇನೆ. ಜೊತೆಗೆ ಒಂದು ಪಾತ್ರದ ಆರ್ಕ್ ಹೆಚ್ಚಿರಬೇಕು ಎಂದು ಬಯಸುತ್ತೇನೆ. ಕ್ಯಾಂಡಿ ಡಾಲ್ ರೀತಿ ಹತ್ತು ನಿಮಿಷ ಬಂದು ಹೋಗುವಂಥ ಸ್ಕ್ರಿಪ್ಟ್‌ಗಳನ್ನು ಆಯ್ಕೆ ಮಾಡಿಕೊಳ್ಳುವುದಿಲ್ಲ. ಒಂದು ಅರ್ಥಬದ್ಧವಾಗಿರುವ ಪಾತ್ರ ಬಂದರೆ ಖುಷಿಯಿಂದ ಅದನ್ನು ಸ್ವೀಕರಿಸುತ್ತೇನೆ, ಅಂಥ ಪಾತ್ರಗಳನ್ನೇ ಎದುರು ನೋಡುತ್ತಿದ್ದೇನೆ.

◆ **ಸದ್ಯ ಸಿನಿಮಾರಂಗದಲ್ಲಿಯೂ ಸ್ಪರ್ಧೆ ಹೆಚ್ಚಿರುವ ಕಾಲವಿದು. ಈ ಸ್ಪರ್ಧೆಗೆ ನಿಮ್ಮನ್ನು ಹೇಗೆ ತಯಾರು ಮಾಡಿಕೊಂಡಿದ್ದೀರಾ?**

ಮೊದಲನೆಯದಾಗಿ, ಸ್ಪರ್ಧೆ ಮೇಲೆ ನಾನು ಗಮನಹರಿಸುವುದಿಲ್ಲ. ನನ್ನ ಪಾತ್ರ, ಸಿನಿಮಾದ ಬಗ್ಗೆ ಸಂಪೂರ್ಣ ಗಮನ ನೀಡುತ್ತೇನೆ. ನನ್ನನ್ನು ನಾನು ಪ್ರತಿದಿನ ಹೇಗೆ ಉತ್ತಮಗೊಳಿಸಿಕೊಳ್ಳಬಹುದು ಎಂಬುದರ ಪ್ರಯತ್ನ ಮಾಡುತ್ತೇನೆ. ಸ್ಪರ್ಧೆ ಎಂದು ತೆಗೆದುಕೊಂಡರೆ ಅದರ ಮೇಲೇ ಗಮನ ಹೆಚ್ಚಾಗುತ್ತದೆ. ಹೀಗಾಗಿ ನನ್ನನ್ನು ನಾನು ಉತ್ತಮ ಮಾಡಿಕೊಳ್ಳದೇ ಹೋಗಬಹುದು. ನನ್ನ ಕೆಲಸದಲ್ಲಿ ಹೊಸತು ಏನು ಮಾಡಬಹುದು, ಏನು ಅಪ್‌ಡೇಟ್ ಆಗಬಹುದು ಎಂಬುದರ ಮೇಲೆ ಕೆಲಸ ಮಾಡುತ್ತೇನೆ. ಆಗ ನಮಗೆ ನಮ್ಮದೇ ರೀತಿಯಲ್ಲಿ ಯಶಸ್ಸು ಸಿಗುತ್ತದೆ ಎಂದು ನಂಬಿದ್ದೇನೆ.

◆ **ಮುಂದಿನ ಹೆಜ್ಜೆ...**

ಸದ್ಯ ಎರಡು ಸಿನಿಮಾಗಳಲ್ಲಿ ನಟಿಸುತ್ತಿದ್ದೇನೆ. ಮತ್ತೊಂದು ಸಿನಿಮಾಗೆ ಸಹಿ ಮಾಡಿದ್ದೇನೆ. ■



# ಮರಳಿ ನಿರ್ದೇಶನದತ್ತ ಅನೀಶ್

ಈಚೆಗೆ ರಿಲೀಸ್ ಆದ 'ಆರಾಮ್ ಅರವಿಂದ ಸ್ವಾಮಿ' ಸಿನಿಮಾ ಯಶಸ್ಸಿನ ಬೆನ್ನಲ್ಲೇ, ನಟ ಅನೀಶ್ ಮತ್ತೊಂದು ದೊಡ್ಡ ಹೆಜ್ಜೆ ಇಟ್ಟಿದ್ದಾರೆ. ಅತ್ಯುತ್ತಮ ಕಂಟೆಂಟ್, ಕಮರ್ಷಿಯಲ್ ಅಂಶವಿರುವ ಪ್ರಾಜೆಕ್ಟ್‌ನಲ್ಲಿ ತೊಡಗಿಕೊಳ್ಳುವುದಾಗಿ ತಿಳಿಸಿದ್ದಾರೆ.

ಆಸಕ್ತಿಕರ ವಿಷಯ ಎಂದರೆ, ಈ ಬಾರಿ ನಿರ್ದೇಶನದಲ್ಲಿ ಮತ್ತೊಮ್ಮೆ ಪ್ರಯತ್ನಕ್ಕೆ ಇಳಿದಿದ್ದಾರೆ ಅನೀಶ್. ಈ ಹಿಂದೆಯೂ 'ರಾಮಾರ್ಜುನ' ಸಿನಿಮಾ ಮೂಲಕ ತಮ್ಮ ನಿರ್ದೇಶನದ ಕೌಶಲವನ್ನು ಪರೀಕ್ಷಿಸಿಕೊಂಡಿದ್ದರು. ಇದೀಗ ಮತ್ತೊಮ್ಮೆ ಕ್ಯಾಮೆರಾ ಹಿಂದೆ ನಿಂತು ಕೆಲಸ ಮಾಡಲು ಅಣಿಯಾಗಿದ್ದಾರೆ. ಭವಪ್ರೀತ್ ಪ್ರೊಡಕ್ಷನ್ ಜೊತೆ ಸೇರಿ ಸಿನಿಮಾ ನಿರ್ದೇಶನ ಮಾಡುತ್ತಿದ್ದು, ವಿಜಯ್ ಎಂ. ರೆಡ್ಡಿ ನಿರ್ಮಾಣದಲ್ಲಿ ತೊಡಗಿಕೊಂಡಿದ್ದಾರೆ.

"ಆರಾಮ್ ಅರವಿಂದ ಸ್ವಾಮಿ' ಸಿನಿಮಾ ಯಶಸ್ಸಿನ ನಂತರ ನನ್ನ ಮುಂದಿನ ಪ್ರಾಜೆಕ್ಟ್ ಬಗ್ಗೆ ಸುದ್ದಿ ಹಂಚಿಕೊಳ್ಳಲು ಖುಷಿಯಾಗುತ್ತಿದೆ. 'ರಾಮಾರ್ಜುನ' ಸಿನಿಮಾ ನಂತರ ಮತ್ತೆ ನಿರ್ದೇಶಕನ ಕುರ್ಚಿಗೆ ಮರಳುತ್ತಿದ್ದೇನೆ. ಈ ಸಲ ಇನ್ನಷ್ಟು ದೊಡ್ಡದು ಹಾಗೂ ಉತ್ತಮವಾದದ್ದನ್ನೇ ನೀಡುತ್ತೇನೆ" ಎಂದು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

'ಈ ಬಾರಿ ದೊಡ್ಡ ಮಟ್ಟದಲ್ಲಿ ಪ್ರೇಕ್ಷಕರನ್ನು ತಲುಪಬೇಕೆಂಬ ಯೋಜನೆಯಿದ್ದು, ಕನ್ನಡ ಹಾಗೂ ತೆಲುಗು ಎರಡು ಭಾಷೆಯಲ್ಲಿಯೂ ಸಿನಿಮಾ ಮಾಡುತ್ತಿದ್ದೇವೆ' ಎಂದು ಮಾಹಿತಿ ನೀಡಿದ್ದಾರೆ. ■

# ಚಂದನವನಕ್ಕೆ 'ಮಹಾನಟಿ'

'ಮಹಾನಟಿ' ವಿಜೇತೆ ಪ್ರಿಯಾಂಕಾ ಆಚಾರ್ ಚಂದನವನಕ್ಕೆ ಎಂಟ್ರಿ ಕೊಟ್ಟಿದ್ದು, ನಟ ರಾಣಾಗೆ ಜೋಡಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ.



'ರಾಬರ್ಟ್' ಸಿನಿಮಾ ಮೂಲಕ ಆಶಾ ಭಟ್, 'ಕಾಟೇರ' ಸಿನಿಮಾ ಮೂಲಕ ಮಾಲಾಶ್ರೀ ಪುತ್ರಿ ಆರಾಧನಾ ರಾಮ್ ಅವರನ್ನು ನಾಯಕಿಯಾಗಿ ಪರಿಚಯಿಸಿದ್ದ ತರುಣ್ ಮತ್ತೋರ್ವ ಹೊಸ ನಟಿಯನ್ನು ಕರೆತಂದಿದ್ದಾರೆ. 'ಏಕ್ ಲವ್ ಯಾ' ಸಿನಿಮಾ ಮೂಲಕ ಕನ್ನಡ ಸಿನಿಮಾರಂಗ ಪ್ರವೇಶಿಸಿದ್ದ ನಟ ರಾಣಾ ನಟಿಸುತ್ತಿರುವ ಹೊಸ ಸಿನಿಮಾವನ್ನು ನಿರ್ದೇಶಕ ತರುಣ್ ಕಿಶೋರ್ ಸುಧೀರ್ ಹಾಗೂ ಅಟ್ಲಾಂಟಾ ನಾಗೇಂದ್ರ ನಿರ್ಮಾಣ ಮಾಡುತ್ತಿದ್ದಾರೆ. 'ಗುರುಶಿಷ್ಯರು' ಸಿನಿಮಾ ಯಶಸ್ಸಿನ ಬಳಿಕ ತರುಣ್ ನಿರ್ಮಾಣ ಮಾಡುತ್ತಿರುವ ಎರಡನೇ ಸಿನಿಮಾ ಇದಾಗಿದೆ. 'ಏಳುಮಲೆಯ ಮಡಿಲಲ್ಲಿ ಎದೆ ನಡುಗಿಸಿದ ಪ್ರೇಮಕಥೆ' ಎಂಬ ಟ್ಯಾಗ್‌ಲೈನ್ ಹೊಂದಿರುವ ಈ ಸಿನಿಮಾ ನಿರ್ದೇಶಕ ಪುನೀತ್ ರಂಗಸ್ವಾಮಿ.

ಪುನೀತ್ ಅವರ ಚೊಚ್ಚಲ ನಿರ್ದೇಶನದ ಸಿನಿಮಾ ಇದಾಗಿದೆ. ಅದ್ವೈತ್ ಗುರುಮೂರ್ತಿ ಈ ಚಿತ್ರದ ಛಾಯಾಚಿತ್ರಗ್ರಹಣ ಮಾಡುತ್ತಿದ್ದು, ಚಿತ್ರದ ಶೂಟಿಂಗ್ ನಡೆಯುತ್ತಿದೆ.

ಪ್ರಿಯಾಂಕಾ ಕೂಡ ಸಿನಿಮಾರಂಗಕ್ಕೆ ಬರುತ್ತಿರುವ ಕುರಿತು ಉತ್ಸುಕರಾಗಿದ್ದು, ಸಿನಿಮಾಗೆ ಅಗತ್ಯ ತಾಲೀಮನ್ನೂ ನಡೆಸುತ್ತಿದ್ದಾರೆ. 20 ದಿನಗಳ ಕಾರ್ಯಾಗಾರದಲ್ಲಿ ಭಾಗವಹಿಸಿದ್ದು, ಪಾತ್ರದ ಆಳ ಅಗಲವನ್ನು ಅರ್ಥ ಮಾಡಿಕೊಂಡು ಪ್ರೇಕ್ಷಕರ ಮನ ಮೆಚ್ಚುವ ಅಭಿನಯ ನೀಡುವುದಾಗಿ ಹೇಳಿದ್ದಾರೆ. ■